# ಅನುಬಂಧ

# ಸಿಟಿಜನ್ ಚಾರ್ಟರ್

ಕರ್ನಾಟಕ ಲೋಕಾಯುಕ್ತ ಅಧಿನಿಯಮವನ್ನು 1986ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಲಾಯಿತು. ಕರ್ನಾಟಕ ಲೋಕಾಯುಕ್ತ ಕಾಯಿದೆ, ಕೆ.ಸಿ.ಎಸ್. (ಸಿಸಿಎ) ನಿಯಮಗಳು ಮತ್ತು ಲಂಚ ನಿರೋಧಕ ಕಾಯಿದೆ, 1988ನ್ನು ಅನುಷ್ಠಾನಗೊಳಿಸಲು ಸರ್ಕಾರ ಈ ಸಂಸ್ಥೆಯನ್ನು ರಚಿಸಿರುತ್ತದೆ. ಈ ಸಂಸ್ಥೆಯಲ್ಲಿ ಕೆಳಕಂಡ ಮೂರು ವಿಭಾಗಗಳು ಕಾರ್ಯ ನಿರ್ವಹಿಸುತ್ತಿವೆ:–

## *I. ಆಡಳಿತ ಶಾಖೆ:*

1. ಈ ಶಾಖೆಗೆ ನಿಬಂಧಕರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಕರ್ನಾಟಕ ಲೋಕಾಯುಕ್ತ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹ ನಿಬಂಧಕರು (ವಿಚಾರಣೆ), ಉಪ ನಿಬಂಧಕರುಗಳು (ವಿಚಾರಣೆ), ಸಹಾಯಕ ನಿಬಂಧಕರು (ಆಡಳಿತ), ಕಾನೂನುಕೋಶ, ಅಭಿಯೋಜಕರು, ಸಹಾಯಕ ಅಭಿಯೋಜಕರು, ಅಲ್ಲದೆ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತರೆ ಅಧಿಕಾರಿಗಳು ನಿಬಂಧಕರ ಆಡಳಿತಕ್ಕೆ ಒಳಪಟ್ಟಿರುತ್ತಾರೆ.

2. ನಿಬಂಧಕರು ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ಸ್ವೀಕರಿಸುವ ಹಾಗೂ ಅಧಿಕಾರಿಗಳಿಗೆ ವಿತರಿಸುವ ಪ್ರಾಧಿಕಾರಿಗಳಾಗಿರುತ್ತಾರೆ.

3. ಸರ್ಕಾರ ಹಾಗೂ ಇತರೆ ಇಲಾಖೆಗಳಿಗೆ ಈ ಸಂಸ್ಥೆಗೆ ಸಂಬಂಧಪಟ್ಟ ವಿಚಾರಗಳನ್ನು ನೇರವಾಗಿ ಸಂಪರ್ಕ ವ್ಯವಹಾರ ಮಾಡುವ ಪ್ರಾಧಿಕಾರಿಗಳಾಗಿರುತ್ತಾರೆ.

4. ಲೋಕಾಯುಕ್ತ ಕಾಯಿದೆಯಡಿಯಲ್ಲಿ ತನಿಖೆ ಮಾಡಿದ ಪ್ರಕರಣಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ ನಂತರ ಅವುಗಳ ಮೇಲೆ ಸರ್ಕಾರವು ಕ್ರಮ ಕೈಗೊಂಡು ಇಲಾಖಾ ವಿಚಾರಣೆಗೆ ಆದೇಶಿಸಿದ ನಂತರ ಗೌರವಾನ್ವಿತ ಲೋಕಾಯುಕ್ತರವರು/ಗೌರವಾನ್ವಿತ ಉಪಲೋಕಾಯುಕ್ತರವರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಅಧಿಕಾರಿಗಳು/ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಿ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಶಿಫಾರಸ್ಸು ಮಾಡಿದ ಪ್ರಕರಣಗಳಲ್ಲಿ ಸರ್ಕಾರಕ್ಕೆ ವರದಿಯನ್ನು ರವಾನಿಸುವ ಪ್ರಾಧಿಕಾರಿಗಳಾಗಿರುತ್ತಾರೆ.

5. ಮಾಹಿತಿ ಪಡೆಯಲು ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಈಗಾಗಲೇ ನಿಬಂಧಕರನ್ನು ಮಾಹಿತಿಯನ್ನು ನೀಡುವ ಪ್ರಾಧಿಕಾರಿಗಳೆಂದು ಘೋಷಿಸಿ ಸರ್ಕಾರಕ್ಕೆ ತಿಳಿಸಲಾಗಿದೆ.

6. ನಿಬಂಧಕರು ಈ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಗ್ರೂಪ್ "ಸಿ" ಮತ್ತು "ಡಿ" ನೌಕರರಿಗೆ ಶಿಸ್ತಿನ ಪ್ರಾಧಿಕಾರಿಗಳಾಗಿರುತ್ತಾರೆ.

ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 15 ರ ಅಡಿಯಲ್ಲಿ ಇತರೆ ನಿಯೋಜಿಸಲ್ಪಟ್ಟ ಅಧಿಕಾರಿಗಳಿಗೆ ಗೌರವಾನ್ವಿತ ಲೋಕಾಯುಕ್ತರವರ ಶಿಸ್ತು ನಿಯಂತ್ರಣದಲ್ಲಿ ಕೆಲಸ ನಿರ್ವಹಿಸಲು ಸದರಿ ನಿಯಮದಲ್ಲಿ ಆಸ್ಪದವಿರುತ್ತದೆ.

7. ಸಾರ್ವಜನಿಕರ ಅನುಕೂಲಕ್ಕಾಗಿ ಲೋಕಾಯುಕ್ತ ಕಛೇರಿಯಲ್ಲಿ ಸ್ವೀಕರಿಸುವ ದೂರುಗಳನ್ನು ಗಣಕೀಕೃತಗೊಳಿಸಲಾಗಿದ್ದು ವ್ಯವಸ್ಥಿತವಾಗಿ ಮಾಹಿತಿಯನ್ನು ಪಡೆಯಲು ಸಹಾಯಕವಾಗಿರುತದೆ. ಅಲ್ಲದೆ ಈ ಸಂಸ್ಥೆಯ ವೆಬ್ ಸೈಟ್‌ನಲ್ಲೂ **(www.kar.nic.in/lokayukta)** ಸಹ ಲಭ್ಯವಿರುತ್ತದೆ.

## *II. ಪೊಲೀಸ್ ವಿಭಾಗ:*

ಈ ವಿಭಾಗವು ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಅವರುಗಳ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲಾ ಮಟ್ಟದಲ್ಲಿ ಪೊಲೀಸ್ ಅಧೀಕ್ಷಕರು/ಪೊಲೀಸ್ ನಿರೀಕ್ಷಕರು, ಅವರುಗಳು ಲಂಚ ನಿರೋಧಕ ಕಾಯಿದೆ, 1988ರ ಅಡಿಯಲ್ಲಿ ದೂರುಗಳನ್ನು ಸ್ವೀಕರಿಸಿ ತನಿಖೆ ಮಾಡುತ್ತಾರೆ. ಈ ಪ್ರಕರಣಗಳಲ್ಲಿ ತನಿಖಾಧಿಕಾರಿಗಳು ಸಕ್ಷಮ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ

ಅಭಿಯೋಜನೆಗೊಳಿಸಲು ಲಂಚ ನಿರೋಧ ಕಾಯ್ದೆಯಲ್ಲಿ ಅವಕಾಶವಿರುತ್ತದೆ. ಸದರಿ ಕಾಯ್ದೆಯಡಿಯಲ್ಲಿ ಆರೋಪಕ್ಕೊಳಗಾದ ಅಧಿಕಾರಿಗಳು/ನೌಕರರನ್ನು ಗೌರವಾನ್ವಿತ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರವರು ಕೆ.ಸಿ.ಎಸ್. (ಸಿಸಿಎ) ನಿಯಮ 14–ಎ ರ ಪ್ರಕಾರ ಇಲಾಖಾ ವಿಚಾರಣೆಗೆ ಗುರಿಪಡಿಸಲು ಅವಕಾಶವಿರುತ್ತದೆ. ಅಲ್ಲದೆ ಸರ್ಕಾರಿ ಅಧಿಕಾರಿಗಳು/ನೌಕರರು ಅಸಮ ಪ್ರಮಾಣದ ಆಸ್ತಿಯನ್ನು ಹೊಂದಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಪ್ರಕರಣವನ್ನು ದಾಖಲಿಸಿ ತನಿಖೆ ಮಾಡಲು ಹಾಗೂ ಆಪಾದಿತ ಸರ್ಕಾರಿ ಅಧಿಕಾರಿಗಳು/ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಲಂಚ ನಿರೋಧ ಕಾಯಿದೆ, 1988ರಡಿ ಕಾರ್ಯನಿರ್ವಹಿಸುತ್ತಾರೆ.

## *III. ತಾಂತ್ರಿಕ ವಿಭಾಗ:*

ಈ ವಿಭಾಗವು ಮುಖ್ಯ ಇಂಜಿನಿಯರ್ ಅವರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತದೆ. ಸೂಪರಿಂಟೆಂಡೆಂಟ್ ಇಂಜಿನಿಯರ್, ಅಸ್ಟಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸ್ಟಿಸ್ಟೆಂಟ್ ಇಂಜಿನಿಯರ್, ಹಾಗೂ ಉಪ ನಿಯಂತ್ರಕರು (ಅಕೌಂಟ್ಸ್) ಅವರುಗಳು ಮುಖ್ಯ ಇಂಜಿನಿಯರ್ ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಲೋಕಾಯುಕ್ತ ಕಾಯಿದೆಯಡಿಯಲ್ಲಿ ಸ್ವೀಕರಿಸಿದ

ದೂರುಗಳನ್ನು ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ ಹಾಗೂ ಇತರೆ ತಾಂತ್ರಿಕ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು/ನೌಕರರ ವಿರುದ್ಧ ದೂರು ಇದ್ದಲ್ಲಿ ಮತ್ತು ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ದೂರುಗಳಿದ್ದಲ್ಲಿ ಅಂತಹ ಪ್ರಕರಣಗಳನ್ನು ತಾಂತ್ರಿಕ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳಿಂದ ತನಿಖೆ ಮಾಡಿಸಿ ವರದಿ ಪಡೆಯಲಾಗುತ್ತಿದೆ. ನಂತರ ಅವರುಗಳ ವರದಿಯಲ್ಲಿ ಆರೋಪಗಳು ಸಾಬೀತು ಆದ ಪ್ರಕರಣಗಳಲ್ಲಿ ನಿಯಮಗಳ ಪ್ರಕಾರ ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಶಿಫಾರಸ್ಸು ಮಾಡಲಾಗುತ್ತದೆ. ಅಲ್ಲದೆ ಲಂಚ ನಿರೋಧ ಕಾಯಿದೆ, 1988ರ ಅಡಿಯಲ್ಲಿ ದಾಖಲಾದ ಅಸೆಟ್ ಪ್ರಕರಣಗಳಲ್ಲಿ ಆಪಾದಿತ ಸರ್ಕಾರಿ ಅಧಿಕಾರಿ/ನೌಕರರು ಹೊಂದಿರುವ ಮನೆ, ವಾಣಿಜ್ಯ ಸಂಕೀರ್ಣ ಮುಂತಾದ ಕಟ್ಟಡಗಳ ಮೌಲ್ಯಮಾಪನವನ್ನು ಮಾಡಿ ವರದಿಯನ್ನು ಪೊಲೀಸ್ ವಿಭಾಗಕ್ಕೆ ಮುಂದಿನ ತನಿಖೆಗಾಗಿ ಪಡೆಯುವ ವ್ಯವಸ್ಥೆ ಇರುತ್ತದೆ.

ಸರ್ಕಾರಿ ನೌಕರರು ತಮ್ಮ ಕೆಲಸಗಳಲ್ಲಿ ಸಾರ್ವಜನಿಕರಿಗೆ ಅನಗತ್ಯ ವಿಳಂಬ, ಕಿರುಕುಳ ನೀಡುತ್ತಿದ್ದರೆ ಅಂತಹ ಸರ್ಕಾರಿ ಅಧಿಕಾರಿಗಳು/ನೌಕರರ ವಿರುದ್ಧ ಸೂಕ್ತ ರೀತಿಯಲ್ಲಿ ದೂರು ಸಲ್ಲಿಸಲು ಲೋಕಾಯುಕ್ತ ಸಂಸ್ಥೆಯಲ್ಲಿ ವ್ಯವಸ್ಥೆ ಮಾಡಲಾಗಿರುತ್ತದೆ. ಫಿರ್ಯಾದುದಾರರು ತಮ್ಮ ದೂರುಗಳ ಮೇಲಿನ ತನಿಖೆ ವಿವರವನ್ನು ವೆಬ್ ಸೈಟ್ ಅಥವಾ ಲಿಖಿತ ಮೂಲಕ ಪಡೆಯಬಹುದಾಗಿದೆ.

ಸರ್ಕಾರದ ನಡವಳಿಕೆ ಸಂಖ್ಯೆ:ಸಿಅಸುಇ 32 ಸೇಇವಿ 99ದಿನಾಂಕ:2–7–2001ರಲ್ಲಿ ತಿಳಿಸಿರುವಂತೆ ಸಾರ್ವಜನಿಕರಿಗೆ ಸರ್ಕಾರಿ ಕಛೇರಿಗಳಲ್ಲಿ ನೌಕರರು/ಅಧಿಕಾರಿಗಳು ತಮ್ಮ ದಿನನಿತ್ಯ ಕೆಲಸಗಳನ್ನು ನಿರ್ವಹಿಸಲು ಅನಗತ್ಯ ವಿಳಂಬ ಮಾಡಿದಲ್ಲಿ ಅಥವಾ ನಿರ್ಲಕ್ಷ್ಯ ತೋರಿದಲ್ಲಿ ಕೂಡಲೇ ವಿವರಗಳೊಂದಿಗೆ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡಗಳು, ಬೆಂಗಳೂರು, ಅವರಿಗೆ ದೂರಿನ ಮೂಲಕ ಸಲ್ಲಿಸಬಹುದಾಗಿದೆ ಎಂದು ಸರ್ಕಾರ ಆದೇಶಿಸಿರುತ್ತದೆ.

ಸದರಿ ಆದೇಶದಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಮೇಲೆ ನಮೂದಿಸಿರುವಂತೆ ನಾಮಫಲಕ ಹಾಕಲು ಸರ್ಕಾರವು ಈಗಾಗಲೇ ಆದೇಶ ಮಾಡಿರುತ್ತದೆ. ಸಾರ್ವಜನಿಕರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು.

ಲೋಕಾಯುಕ್ತ ಸಂಸ್ಥೆಯು ಈ ರೀತಿಯಾಗಿ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹಾಗೂ ಸರ್ಕಾರಿ ನೌಕರರು, ಅಧಿಕಾರಿಗಳು ಅಕ್ರಮ ಸಂಭಾವನೆ ಪಡೆಯುವುದನ್ನು ನಿಯಂತ್ರಣಗೊಳಿಸಲು ಕೆಲಸ ನಿರ್ವಹಿಸುತ್ತಿದೆ.

* * * * * *